ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ಎನ್ಎಸ್ - 19

2ನೇ ವರ್ಷ 19ನೇ ಸಂಚಿಕೆ ಕೊಪ್ಪ 6-1-1985 ಭಾನುವಾರ ಬೆಲೆ 40 ಪೈಸೆ

ಹರಿಹರಪುರದಲ್ಲಿ ಜಿಲ್ಲಾ ಕ್ರೀಡಾಕೂಟ

ನಿವೃತ್ತ ಕ್ರೀಡಾಪಟು ಪಿ. ಜಿ. ಗುರ್ಜರ್‌ರಿಗೆ ಸನ್ಮಾನ

ಹರಿಹರಪುರ: ಇತ್ತೀಚಿನ ವರ್ಷಗಳಲ್ಲಿ ಎರಡನೇ ಬಾರಿಗೆ ಇಲ್ಲಿನ ಕಿರಿಯ ಕಾಲೇಜಿನಲ್ಲಿ ಏರ್ಪಡಿಸಲಾಗಿರುವ ಚಿಕ್ಕಮಗಳೂರು ಜಿಲ್ಲಾ ಮಟ್ಟದ ಪ್ರೌಢಶಾಲಾ ಕ್ರೀಡಾಕೂಟವು ಇದೇ ತಿಂಗಳ 8 ಮತ್ತು 9 ನೇ ತಾರೀಖು ನಡೆಯಲಿದೆ. ಈ ಸಂದರ್ಭದಲ್ಲಿ ನಿವೃತ್ತ ಕ್ರೀಡಾಪಟು ಹಾಗೂ ಕ್ರೀಡಾ ಪ್ರೋತ್ಸಾಹಕರಾದ ಪಿ.ಜಿ. ಗುರ್ಜರ್‌ರವರನ್ನು ಸನ್ಮಾನಿಸಲಾಗುವುದು.

ಈ ಕ್ರೀಡಾಕೂಟದಲ್ಲಿ ಜಿಲ್ಲೆಯ ಎಲ್ಲಾ ಭಾಗಗಳಿಂದ (ತಾಲ್ಲೂಕ್ ಸ್ಪರ್ಧೆಯಲ್ಲಿ ವಿಜೇತರಾದ) ಸುಮಾರು 400 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ರಾಷ್ಟ್ರಮಟ್ಟದ ಖ್ಯಾತಿಯ ಅನೇಕ ಕ್ರೀಡಾಪಟುಗಳು ವಿಶೇಷವಾಗಿ ಚಿಕ್ಕಮಗಳೂರು ಹಾಗೂ ಮೂಡಿಗೆರೆ ತಾಲ್ಲೂಕ್‌ಗಳಿಂದ ಭಾಗವಹಿಸಲಿದ್ದು ಕೊಪ್ಪ ತಾಲ್ಲೂಕಿನ ಕ್ರೀಡಾಪಟುಗಳು ಅವರುಗಳಿಗೆ ತೀವ್ರವಾದ ಪ್ರತಿಸ್ಪರ್ಧೆ ನೀಡುವ ನಿರೀಕ್ಷೆಯಿದೆ.

ಈ ಕ್ರೀಡಾ ಕೂಟದ ಮಾರ್ಗದರ್ಶಿಗಳೂ ಹರಿಹರಪುರ ಪ್ರೌಢಶಾಲೆಯ ಪೋಷಕರೂ ಆದ ಹರಿಹರಪುರ ಮಠಾಧೀಶರು, ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ಸೆಮ್ಮಯ್ಯ, ಅಂತರ ರಾಷ್ಟ್ರೀಯ ಖ್ಯಾತಿಯ ಕುಸ್ತಿ ತರಬೇತಿದಾರರೂ ರಾಜ್ಯ ಕುಸ್ತಿ ಸಂಸ್ಥೆಯ ಕಾರ್ಯದರ್ಶಿಗಳೂ ಬೆಂಗಳೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಧ್ಯಾಪಕರೂ ಆದ ಟಿ.ಆರ್. ಸ್ವಾಮಿ, ಖ್ಯಾತ ಕುಸ್ತಿ ಪಟು ಅರ್ಜುನ್ ಖಾನಾಪುರೆ ಮೊದಲಾದವರು ಉದ್ಘಾಟನಾ ಹಾಗೂ ಪ್ರಶಸ್ತಿ ವಿತರಣಾ ಸಮಾರಂಭಗಳಲ್ಲಿ ಭಾಗವಹಿಸಲಿದ್ದಾರೆ.

ಈ ಹಿಂದೆ ಅತ್ಯಂತ ಯಶಸ್ವಿಯಾಗಿ ಕ್ರೀಡಾಕೂಟವನ್ನು ನಡೆಸಿದ ಹರಿಹರಪುರ ಕಿರಿಯ ಕಾಲೇಜಿನ ಪ್ರಾಂಶುಪಾಲರಾದ ಬಿ.ಎನ್ ಸತ್ಯನಾರಾಯಣ ಹಾಗೂ ದೈಹಿಕ ಶಿಕ್ಷಕರಾದ ವಿ. ಎಂ. ಶಿವಮೂರ್ತಿಯವರು ಈ ಸಾರಿಯ ಕ್ರೀಡಾಕೂಟಕ್ಕೆ ಭರದ ಸಿದ್ಧತೆಗಳನ್ನು ನಡೆಸಿದ್ದಾರೆ.

(ವರದಿ: ಹೆಚ್.ಎ. ಗೋಪಾಲ್.)

ನರಸಿಂಹರಾಜಪುರ ತಾಲ್ಲೂಕನ್ನು ಹರಿದು ಶೃಂಗೇರಿ, ಕೊಪ್ಪ ಹಾಗೂ ಶಿವಮೊಗ್ಗ ತಾ॥ ಗಳಿಗೆ ಸೇರ್ಪಡೆ ಮಾಡುವ ಶಿಫಾರ್ಸೊಂದು ಮಾಡಲ್ಪಟ್ಟಿದೆಯೆಂದು ವರದಿಯಾಗಿದ್ದು, ಇದನ್ನು ತಾಲ್ಲೂಕಿನ ಜನತೆ ಉಗ್ರವಾಗಿ ವಿರೋಧಿಸುತ್ತಿದ್ದಾರೆಂದು ತಿಳಿದುಬಂದಿದೆ.

ಲಯನ್ಸ್ ಕ್ಲಬ್ ಏರ್ಪಡಿಸಿದ ರಕ್ತದಾನ ಶಿಬಿರದಲ್ಲಿ 111 ಬಾಟಲು ರಕ್ತ ಸಂಗ್ರಹಣೆ

ಕೊಪ್ಪ: ಜ. 3ರಂದು ಇಲ್ಲಿನ ಲಯನ್ಸ್ ಕ್ಲಬ್ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ 111 ಬಾಟಲು ರಕ್ತ ಸಂಗ್ರಹಣೆಯಾಯಿತು. ಪ್ರ.ದ. ಕಾಲೇಜು ವಿದ್ಯಾರ್ಥಿಗಳಿಂದ 25 ಬಾಟಲು, ಉತ್ತಮೇಶ್ವರ ಗ್ರಾಮಸ್ಥರಿಂದ 20, ಲಯನ್ಸ್ ಸದಸ್ಯರಿಂದ 30, ಲಯನ್ ಲೇಡೀಸ್ 8 ಮತ್ತು ಮಿಕ್ಕಿದ್ದು ಸಾರ್ವಜನಿಕರಿಂದ ಕೊಡಲ್ಪಟ್ಟಿತು. ಈ ಸಮಾರಂಭವನ್ನು ಲಯನ್ಸ್ ಜಿಲ್ಲಾ ಗೌರ್ನರ್ ಲ॥ ವಿ. ಕೆ. ರೇವಣಕರ್ ಉದ್ಘಾಟಿಸಿದರು.

ಇಲ್ಲಿನ ಪ್ರ.ದ. ಕಾಲೇಜಿನಲ್ಲಿ ಕುಡಿವ ನೀರಿಗಾಗಿ ಸುಮಾರು 6 ಸಾವಿರ ರೂ. ವೆಚ್ಚದಲ್ಲಿ ಉಕ್ಕಿನ ಟ್ಯಾಂಕ್ ಒಂದನ್ನು ಲಯನ್ಸ್ ಕ್ಲಬ್ ಸ್ಥಾಪಿಸಿದೆ.

ಅಂದೇ ಏರ್ಪಡಿಸಿದ್ದ ವಿಧವಾ ಮಾಸಾಶನ ಮತ್ತು ವೃದ್ಧಾಪ್ಯವೇತನ ಶಿಬಿರದಲ್ಲಿ ತಲಮಕ್ಕಿ ಗ್ರಾಮದ ಸುಮಾರು 130 ಮಂದಿ ಪ್ರಯೋಜನ ಪಡೆದರು. ಅವರೆಲ್ಲರ ಫೋಟೋ ಮತ್ತು ಮಧ್ಯಾಹ್ನದ ಊಟದ ಖರ್ಚನ್ನು ಲಯನ್ಸ್ ಕ್ಲಬ್ ಭರಿಸಿತು.

ಅಲ್ಲದೆ ಪರಿಶಿಷ್ಟ ಜಾತಿ/ವರ್ಗದ 5 ಜನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯವರೆಗೆ ಭಾರ್ಗವ ಟ್ಯುಟೋರಿಯಲ್ಸ್‌ನಲ್ಲಿ ಪಾಠದ ವ್ಯವಸ್ಥೆಯನ್ನೂ ಕ್ಲಬ್ ಕಲ್ಪಿಸಿ ಕೊಟ್ಟಿತು.

ಶೃಂಗೇರಿ ಕ್ಷೇತ್ರದ ಜನತಾ ಕಾರ್ಯಕರ್ತರ ಸಭೆ

ಕೊಪ್ಪ: ಶೃಂಗೇರಿ ಕ್ಷೇತ್ರದ ಜನತಾ ಕಾರ್ಯಕರ್ತರ ಸಭೆಯನ್ನು ಗೋವಿಂದ ಗೌಡರು ಕರೆದಿದ್ದಾರೆ. ತಾರೀಕು ಈ ಕೆಳಗಿನಂತಿದೆ: ಜ. 10 ರಂದು ಶೃಂಗೇರಿ ಪ್ರವಾಸಿ ಮಂದಿರದಲ್ಲಿ, ಜ. 11 ಕೊಪ್ಪ ಪುರಭವನದಲ್ಲಿ, ಜ. 12 ರಂದು ನ. ರಾ. ಪುರ ಪ್ರವಾಸಿ ಮಂದಿರದಲ್ಲಿ. ಆಯಾ ತಾಲ್ಲೂಕಿನ ಕಾರ್ಯಕರ್ತರು ಬೆಳಿಗ್ಗೆ 10.30 ಕ್ಕೆ ಸರಿಯಾಗಿ ಸಭೆಗೆ ಹಾಜರಾಗಬೇಕೆಂದು ಕೋರಿದ್ದಾರೆ.

ರಾಜೀವ್ ಗಾಂಧಿ ಸಚಿವ ಸಂಪುಟ

ರಾಜೀವ ಗಾಂಧಿ ಅವರೂ ಸೇರಿದಂತೆ 40 ಮಂದಿಯ ಕೇಂದ್ರ ಮಂತ್ರಿ ಮಂಡಳ ಈ ಕೆಳಗಿನಂತೆ ಇದೆ. ಪ್ರಧಾನಿ ಅಲ್ಲದೆ 14 ಜನ ಕ್ಯಾಬಿನೆಟ್ ದರ್ಜೆ ಸಚಿವರು, ಸ್ವತಂತ್ರ ಹೊಣೆಯುಳ್ಳ 6 ಜನ ರಾಜ್ಯ ಸಚಿವರು ಮತ್ತು 19 ಜನ ಕಾರ್ಯ ಸಚಿವರು ಇರುತ್ತಾರೆ. ಕ್ಯಾಬಿನೆಟ್ ದರ್ಜೆ ಸಚಿವರಿಗೆ ಅಥವಾ ಸ್ವತಂತ್ರಹೊಣೆಯ ಕಾರ್ಯ ಸಚಿವರಿಗೆ ವಹಿಸದೆ ಇರುವ ವಾಣಿಜ್ಯ ಮತ್ತು ಪೂರೈಕೆ, ಪರಿಸರ ಮತ್ತು ಅರಣ್ಯ, ವಿದೇಶಾಂಗ, ಉದ್ದಿಮೆ ಮತ್ತು ಕಂಪನಿ ವ್ಯವಹಾರ, ವಿಜ್ಞಾನ ಮತ್ತು ತಂತ್ರಜ್ಞಾನ, ಅಣುಶಕ್ತಿ, ಯುವಜನ ಸೇವೆ, ಸಂಸ್ಕೃತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಬಾಹ್ಯಾಕಾಶ, ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನ ಯಾನ, ಕ್ರೀಡೆ ಇತ್ಯಾದಿ ಖಾತೆಗಳನ್ನು ರಾಜ್ಯ ಸಚಿವರ ಸಹಾಯದೊಂದಿಗೆ ರಾಜೀವ್ ಗಾಂಧಿಯೇ ನೋಡಿಕೊಳ್ಳುತ್ತಾರೆ.

ಖಾತೆಗಳು	ಸಚಿವರು
ಪ್ರಧಾನಮಂತ್ರಿ	ರಾಜೀವಗಾಂಧಿ
ಕ್ಯಾಬಿನೆಟ್ ದರ್ಜೆ	
ಹಣಕಾಸು	ವಿಶ್ವನಾಥ ಪ್ರತಾಪ್ ಸಿಂಗ್
ರಕ್ಷಣೆ (ಮತ್ತು ತಾತ್ಕಾಲಿಕವಾಗಿ ಯೋಜನೆ)	ಪಿ.ವಿ. ನರಸಿಂಹರಾವ್
ಕಾಮಗಾರಿ ಮತ್ತು ಗೃಹನಿರ್ಮಾಣ	ಅಬ್ದುಲ್ ಗಫೂರ್
ನೀರಾವರಿ ಮತ್ತು ವಿದ್ಯುತ್	ಶಂಕರಾನಂದ
ರೈಲ್ವೇ	ಬನ್ಸೀಲಾಲ್
ಕಾನೂನು ಮತ್ತು ನ್ಯಾಯ	ಅಶೋಕಸೇನ್
ಶಿಕ್ಷಣ	ಕೆ. ಸಿ. ಪಂತ್
ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ	ಬೂಟಾಸಿಂಗ್
ಉಕ್ಕು, ಗಣಿ, ಕಲ್ಲಿದ್ದಲು	ವಸಂತಸಾಠೆ
ಆಹಾರ ಮತ್ತು ನಾಗರಿಕ ಪೂರೈಕೆ	ರಾವ್ ಬೀರೇಂದ್ರಸಿಂಗ್
ಆರೋಗ್ಯ ಮತ್ತು ಕುಟುಂಬ ಯೋಜನೆ	ಮೊಹ್ಸಿನಾ ಕಿದ್ವಾಯಿ
ಸಂಸದೀಯ ವ್ಯವಹಾರ	ಎಚ್.ಕೆ.ಎಲ್. ಭಗತ್
ರಾಸಾಯನಿಕ ಮತ್ತು ರಸಗೊಬ್ಬರ	ವೀರೇಂದ್ರಪಾಟೀಲ್
ಗೃಹ	ಎಸ್.ಬಿ. ಚವಾಣ್
ರಾಜ್ಯ ಸಚಿವರು (ಸ್ವತಂತ್ರ ಹೊಣೆ)	
ಮಹಿಳಾ ಮತ್ತು ಸಮಾಜ ಕಲ್ಯಾಣ	ಮರಗತಂ ಚಂದ್ರಶೇಖರ್
ಪೆಟ್ರೋಲಿಯಂ	ನವಲ್ ಕಿಶೋರ್ ಶರ್ಮಾ
ಸಂಪರ್ಕ	ರಾಂ ನಿವಾಸ್ ಮಿರ್ಧಾ
ಕಾರ್ಮಿಕ	ಟಿ. ಅಂಜಯ್ಯ
ಸುದ್ದಿ ಮತ್ತು ಪ್ರಸಾರ	ವಿ.ಎನ್. ಗಾಡ್ಗೀಳ್
ನೌಕಾಯಾನ ಮತ್ತು ಸಾರಿಗೆ	ಝಡ್. ಆರ್. ಅನ್ಸಾರಿ
ರಾಜ್ಯ ಸಚಿವರು	
ಉದ್ದಿಮೆ ಮತ್ತು ಕಂಪೆನಿ ವ್ಯವಹಾರ	ಆರಿಫ್ ಮೊಹ್ಮದ್ ಖಾನ್
ವಿದ್ಯುತ್	ಅರುಣ್ ನೆಹ್ರೂ
ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನ ಯಾನ	ಅಶೋಕ್ ಗೆಹ್ಲಾಟ್
ಪರಿಸರ ಮತ್ತು ಅರಣ್ಯ	ಬೀರ್ ಸೇನ್
ಗ್ರಾಮೀಣ ಅಭಿವೃದ್ಧಿ	ಚಂದೂಲಾಲ್ ಚಂದ್ರಾಕರ್
ಸಂಸದೀಯ ವ್ಯವಹಾರ	ಗುಲಾಂ ನಬಿ ಆಝಾದ್ ಮತ್ತು ಮಾರ್ಗರೆಟ್ ಆಳ್ವ
ಕಾನೂನು ಮತ್ತು ನ್ಯಾಯ	ಎಚ್.ಆರ್. ಭಾರದ್ವಾಜ್
ಹಣಕಾಸು	ಬಿ. ಜನಾರ್ದನಪೂಜಾರಿ
ವಿದೇಶ ವ್ಯವಹಾರ	ಕುರ್ಷಿದ್ ಅಲಂಖಾನ್
ಸಿಬ್ಬಂದಿ, ಆಡಳಿತ ಸುಧಾರಣೆ ಮತ್ತು ಸಂಸ್ಕೃತಿ	ಕೆ.ಪಿ. ಸಿಂಗ್ ದೇವ್
ಯೋಜನೆ	ಕೆ.ಆರ್. ನಾರಾಯಣನ್
ರೈಲ್ವೆ	ಮಾಧವರಾವ್ ಸಿಂಧಿಯಾ
ಉಕ್ಕು	ನಟವರ್ ಸಿಂಗ್
ವಾಣಿಜ್ಯ ಮತ್ತು ಪೂರೈಕೆ	ಪಿ.ಎ. ಸಂಗ್ಮಾ
ಕ್ರೀಡೆ ಮತ್ತು ಯುವಜನ ಸೇವೆ	ಆರ್.ಕೆ. ಜೈಚಂದ್ರ ಸಿಂಗ್
ಗೃಹ	ರಾಂ ದುಲಾರಿ ಸಿನ್ಹಾ
ವಿಜ್ಞಾನ, ತಾಂತ್ರಿಕತೆ, ಸಾಗರಅಭಿವೃದ್ಧಿ, ಅಣು ವಿದ್ಯುತ್, ಬಾಹ್ಯಾಕಾಶ ಮತ್ತು ಇಲೆಕ್ಟ್ರಾನಿಕ್	ಶಿವರಾಜಪಾಟೀಲ್
ಆರೋಗ್ಯ	ಯೋಗೇಂದ್ರ ಮಕ್ವಾನಾ

ರಾಜ್ಯದಲ್ಲಿ ಮೊದಲಸಲ ಉಸ್ತುವಾರಿ ಸರ್ಕಾರ

ಬೆಂಗಳೂರು: ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ನೇಮಕಗೊಳ್ಳುತ್ತಿರುವ 'ಉಸ್ತುವಾರಿ ಸರ್ಕಾರ'ದ ಮುಖ್ಯಮಂತ್ರಿಯಾಗಿ ಮುಂದುವರಿಯಲು ರಾಮಕೃಷ್ಣ ಹೆಗಡೆ ಒಪ್ಪಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಸೋತ 5 ಜನ ಮಂತ್ರಿಗಳನ್ನು ಬಿಟ್ಟು ಉಳಿದ 29 ಜನರ ಸಂಪುಟವು ವಿಧಾನ ಸಭೆಗೆ ಹೊಸದಾಗಿ ಚುನಾವಣೆ ನಡೆಯುವವರೆಗೆ ಕೆಲಸ ನಿರ್ವಹಿಸುತ್ತದೆ.

ನಾಟಕೋತ್ಸವ— ಒಂದು ಸಮೀಕ್ಷೆ

ಚುನಾವಣೆಯ ಗೊಂದಲಗಳ ನಡುವೆ ಬಂದ ಈ ಸಲದ ಕ್ರಿಸ್‌ಮಸ್ ಹಬ್ಬ ಕೊಪ್ಪದ ನಾಗರಿಕರಿಗೆ ಸಂತೋಷದಾಯಕವಾಗಿತ್ತು. ಇದಕ್ಕೆ ಪ್ರಮುಖ ಕಾರಣ ಪೂಜ್ಯ ಫಾದರ್‌ರವರ ಮಾರ್ಗದರ್ಶನದಲ್ಲಿ ನಿತ್ಯಾಧಾರ ಮಾತಾ ಯುವಜನ ಸಂಘದವರು ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ನಾಟಕ ಸ್ಪರ್ಧೆ.

ನಾಟಕವೆಂಬುದು ಹಿಂದಿನಿಂದಲೂ ಜನಾದರಣೆ ಪಡೆದ ಸಾಹಿತ್ಯ ಪ್ರಕಾರ. ಕಾಳಿದಾಸನ ಅಭಿಪ್ರಾಯದಲ್ಲಿ, ನವರಸಗಳಿಂದಲೂ, ಲೋಕನಾಯಕರ ನಡೆನುಡಿಗಳ ಅನುಕರಣೆಗಳಿಂದಲೂ ಕೂಡಿದ ಇದು 'ಕಣ್ಣುಗಳಿಗೆ ಒಂದು ಹಬ್ಬ'; 'ವಿಭಿನ್ನ ರುಚಿಯುಳ್ಳ ಜನಸಮುದಾಯಕ್ಕೆ ಆನಂದದ ಸಮಾರಾಧನೆ'. ಸಿನಿಮಾ ಪ್ರಧಾನಯುಗದಲ್ಲಿಯೂ ಸಾಮೂಹಿಕ ಮನರಂಜನೆಗೆ ಮತ್ತು ಜಾಗೃತಿಗೆ ನಾಟಕಗಳು ಉತ್ತಮ ಮಾಧ್ಯಮವಾಗಿಯೇ ಉಳಿದಿವೆ.

ಸ್ಪರ್ಧೆಯಲ್ಲಿ ಭಾಗವಹಿಸಿದ ತಂಡಗಳು ಐದು ಮಾತ್ರ. ಮುಂದೆ ಇದು ಹೆಚ್ಚುವ ಆಸೆಯನ್ನು ಇರಿಸಿಕೊಳ್ಳಬಹುದು. ಸ್ಪರ್ಧಿಗಳು ಬಹುಮಾನವನ್ನೇ ಗುರಿಯಾಗಿರಿಸಿಕೊಳ್ಳದೆ, ನೈಜ ಸ್ಪರ್ಧಾಮನೋಭಾವದಿಂದ ಪಾಲ್ಗೊಂಡಿದ್ದೊಂದು ಸಂತೋಷದ ಸಂಗತಿ.

ಸ್ಪರ್ಧೆಯ ಮೊದಲ ನಾಟಕ 'ಮೀನಿನ ಹೆಜ್ಜೆ'. 'ನೀರಿನಲ್ಲಿ ಮೀನಿನ ಹೆಜ್ಜೆಯನ್ನಾದರೂ ನೋಡಬಹುದು, ಆದರೆ ಹೆಣ್ಣಿನ ಮನಸ್ಸು ಅರಿಯುವುದು ಅಸಾಧ್ಯ' ಎಂಬ ಪರಂಪರಾಗತ ಹೇಳಿಕೆಯ ತಳಹದಿಯ ಮೇಲೆ ಹೆಣೆದ ಒಂದು ಮಧ್ಯಮ ಶ್ರೇಣಿಯ ನಾಟಕ. ಇದಕ್ಕಿಂತ ಬೇರೆ ನಾಟಕವನ್ನು ಆಯ್ದುಕೊಂಡಿದ್ದರೆ ಇನ್ನೂ ಉತ್ತಮವಾಗಿ ಆಡುತ್ತಿದ್ದರು ಎನಿಸುವಂತಿತ್ತು. ಅಭ್ಯಾಸದ ಕೊರತೆಯಿಂದಾಗಿ ಪರದೆಯ ಹಿಂದೆ ನಿಂತು ಹೇಳಿ ಕೊಡುತ್ತಿದ್ದುದು ಕಂಡು ಬರುತ್ತಿತ್ತು. ಶ್ರೀಧರ್ ಪಾತ್ರದಲ್ಲಿ ಜಿ.ಎಲ್.ಕೆ.ಶೆಟ್ಟಿ ಮತ್ತು ಸಂಪತ್ ಪಾತ್ರದಲ್ಲಿ ರಂಗನಾಥ್ ಇವರ ಅಭಿನಯ ಉತ್ತಮವಾಗಿತ್ತು.

ಎರಡನೆಯ ನಾಟಕ ಕೊಪ್ಪದ 'ಅಂಕುರ ಬಳಗ' ದವರ 'ಪೋಲೀಸರಿದ್ದಾರೆ ಎಚ್ಚರಿಕೆ'. ಕೊಪ್ಪದಲ್ಲಿ ಹಲವಾರು ಉತ್ತಮ ನಾಟಕಗಳನ್ನು ಪ್ರದರ್ಶಿಸಿ, ಕಲೆಯ ಬಗ್ಗೆ ಆಸಕ್ತಿಯನ್ನು ಮೂಡಿಸಿದ ಕೀರ್ತಿ 'ಅಂಕುರ ಬಳಗ'ದವರಿಗೆ ಸಲ್ಲುತ್ತದೆ. ಈ ನಾಟಕದಲ್ಲಿ ಪೋಲೀಸರ ಪಾತ್ರ ರಂಗದ ಮೇಲೆ ಬರುವುದಿಲ್ಲ. ಇಲ್ಲಿ ಪೋಲೀಸರೆಂಬುದು ದರ್ಪ, ಕ್ರೌರ್ಯ ಮತ್ತು ದಬ್ಬಾಳಿಕೆಗಳ ಸಂಕೇತ. ತನ್ನ ಸುತ್ತಮುತ್ತಲ ಎಲ್ಲರಿಂದಲೂ ದರ್ಪ, ಕ್ರೌರ್ಯಕ್ಕೊಳಗಾಗುವ ನಿಷ್ಕಪಟ, ಸೂಕ್ಷ್ಮ ಮನಸ್ಸಿನ ವ್ಯಕ್ತಿಯೊಬ್ಬ ಕಡೆಗೆ ಭ್ರಮಾಧೀನನಾಗಿ ಸುತ್ತಲ ಎಲ್ಲರಲ್ಲೂ ಪೋಲೀಸರ ಪ್ರತಿರೂಪವನ್ನೇ ಕಾಣುತ್ತ ದುರಂತಕ್ಕೀಡಾಗುವುದು ನಾಟಕದ ಕಥಾವಸ್ತು. ಅಭಯಕ್ಕೆ ಸಂಕೇತವಾಗಬೇಕಾಗಿದ್ದ ಪೋಲೀಸರು ಕ್ರೌರ್ಯ ದಬ್ಬಾಳಿಕೆಗಳಿಗೆ ಸಂಕೇತವಾಗಿರುವುದು ಇಂದಿನ ವಸ್ತು ಸ್ಥಿತಿಯೇ ತಾನೆ?

ಇಂಥ ಸಾಂಕೇತಿಕ ನಾಟಕಗಳ ಒಂದು ದೌರ್ಬಲ್ಯವೆಂದರೆ ಅವು ಸಾಮಾನ್ಯ ಪ್ರೇಕ್ಷಕರಿಗೆ ಅಸಂಬದ್ಧ ಹರಟೆಯಾಗಿ ಕಾಣುವುದು. ಈ ನಾಟಕವೂ ಇದಕ್ಕೆ ಹೊರತಲ್ಲ. ಆದರೆ ನಾಟಕದಲ್ಲಿ ಭಾಗವಹಿಸಿದ ಮೂವರೂ ಪಳಗಿದವರಾದ್ದರಿಂದ ಪ್ರದರ್ಶನ ನಿರಾಶಾದಾಯಕವಾಗಲಿಲ್ಲ. ಭಾವಾನುಗುಣವಾಗಿ ಧ್ವನಿಯ ಏರಿಳಿತಗಳನ್ನು ಸಾಧಿಸಿದ ಗುರುರಾಜ ತಂತ್ರಿಯವರ ಅಭಿನಯ ಉತ್ತಮವಾಗಿತ್ತು.

ಬಾಳಗಡಿಯ ಸರ್ವೋದಯ ಯುವಕ ಸಂಘದವರ 'ಮೃತ್ಯು' ಎಂಬ ನಾಟಕ ಪ್ರೇಕ್ಷಕರಿಗೆ ಒಳ್ಳೆಯ ಮನರಂಜನೆಯನ್ನು ನೀಡಿತು. ನಿರ್ದೇಶನ ಯಥೋಚಿತವಾಗಿತ್ತು. ಆದರೆ ಪಾತ್ರಧಾರಿಗಳಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಇಲ್ಲಿ ಹೆಚ್ಚು ಅವಕಾಶವಿರಲಿಲ್ಲ. ಈ ತಂಡದವರು ಪ್ರಯತ್ನಿಸಿದರೆ ಉತ್ತಮ ನಾಟಕಗಳನ್ನು ಆಡಬಲ್ಲರೆಂಬ ಭರವಸೆಯನ್ನು ಮೂಡಿಸಿದರು.

ನಾಲ್ಕನೆಯ ನಾಟಕ ಗುಣವಂತೆಯ ಭಾಗ್ಯೋದಯ ಯುವಕ ಸಂಘದವರ 'ಗುಂಡನ ಮದುವೆ'. ಇದರಲ್ಲಿ ಭಾಗವಹಿಸಿದವರು ವಿದ್ಯಾರ್ಥಿ ದೆಸೆಯಿಂದಲೂ ನಾಟಕಗಳಲ್ಲಿ ಪಾತ್ರವಹಿಸಿದ ಉತ್ಸಾಹಿಗಳು. ಆದರೆ ಇದರಲ್ಲಿ ಒಬ್ಬನೇ ಪಾತ್ರಧಾರಿಯು ಉತ್ತರ ಕರ್ನಾಟಕದ ಧಾಟಿಯಲ್ಲಿ ಕೆಲವು ಮಾತುಗಳನ್ನೂ, ಮತ್ತೆ ಕೆಲವನ್ನು ನಮ್ಮ ದೈನಂದಿನ ಧಾಟಿಯಲ್ಲಿಯೂ ಆಡುತ್ತಿದ್ದುದು ಅಭ್ಯಾಸ ಸಾಲದೆನ್ನುವುದಕ್ಕೆ ಸೂಚಿಯಾಗಿತ್ತು. ಹಾಸ್ಯ ಪ್ರಧಾನವಾದ ಈ ನಾಟಕದಲ್ಲಿ ಪಿ. ವಿ. ನರಸಿಂಹ(ಗುಂಡ) ಹಾಸ್ಯ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಬಲ್ಲೆನೆಂಬ ಭರವಸೆ ಮೂಡಿಸಿದರು.

ಕೊನೆಯದು ಬ್ಯಾಂಕರ್ಸ್ ರಿಕ್ರಿಯೇಷನ್ ಕ್ಲಬ್ ನವರ 'ಒಂದೂರಲ್ಲಿ ಒಬ್ಬ'. ಇದರಲ್ಲಿ, ತನ್ನ ಹಾಡಿಗೆ ತಾನಿದ್ದವನೊಬ್ಬನು ಹಾಳು ಬಾವಿಗೆ ಬೀಳುತ್ತಾನೆ. ಅವನನ್ನು ಎತ್ತುವುದಕ್ಕಾಗಿ ದೊಡ್ಡ ಸಭೆ ಸೇರಿಸುತ್ತಾರೆ. ಮಂತ್ರಿಗಳೇ ಬರುತ್ತಾರೆ. ಹಗ್ಗ ಹಾಕಿ ಮೇಲ್ಗಿನವರೆಗೆ ಎತ್ತುತ್ತಾರೆ. ಅಷ್ಟರಲ್ಲಿ ತಮ್ಮ ಫೋಟೋ ತೆಗೆಸಿಕೊಳ್ಳುವ ಅವಾಂತರದಲ್ಲಿ ಹಗ್ಗವನ್ನು ಕೈ ಬಿಡುತ್ತಾರೆ. ಅವನು ಮತ್ತೆ ಕೆಳಗೆ ಬಿದ್ದು ಸತ್ತು ಹೋಗುತ್ತಾನೆ. ಅವನ ಪ್ರಾಣಕ್ಕಿಂತ ನಾಯಕರಿಗೆ ತಮ್ಮ ಪ್ರತಿಷ್ಠೆ ಹೆಚ್ಚಿನದಾಗುತ್ತದೆ.

ಇಲ್ಲಿ ಜನರ ಮಾನ ಪ್ರಾಣಗಳಿಗಿಂತ ತಮ್ಮ ಸ್ವಾರ್ಥವೇ ಪ್ರಧಾನವಾದ ರಾಜಕಾರಣಿಗಳ ವಿಡಂಬನೆಯಿದೆ. ದುರ್ಬಲರನ್ನೇ ಬಂಡವಾಳವಾಗಿರಿಸಿಕೊಂಡು ಅಟ್ಟಹಾಸ ಮಾಡುವ ಬಲಿಷ್ಠರ ನೈಜ ಚಿತ್ರಣವಿದೆ. ಇಂಥ ಘಟನೆಗಳು ದಿನ ನಿತ್ಯ ನಡೆಯುತ್ತಿವೆ. ಇತ್ತೀಚೆಗೆ ವಿಷಾನಿಲ ದುರಂತದಲ್ಲಿ ಸತ್ತವರ ಹೆಣಗಳನ್ನು ಲಾರಿಗಳಿಗೆ ತುಂಬುತ್ತಿದ್ದರೆ, ಅದೇ ಊರಿನಲ್ಲಿ ಮತ್ತೊಂದೆಡೆ ಅದರ ಪರಿವೆಯೇ ಇಲ್ಲದೆ ಚುನಾವಣಾ ಪ್ರಚಾರಕ್ಕಾಗಿ ದೊಡ್ಡ ದೊಡ್ಡ ಬ್ಯಾನರ್‌ಗಳನ್ನು, ಕಟೌಟ್‌ಗಳನ್ನು ಲಾರಿಗಳಿಗೆ ತುಂಬುತ್ತಿದ್ದರಂತೆ! ಮಾನವೀಯತೆಯ ಎಂಥ ಅಪಹಾಸ್ಯ! ಇಂಥ ಘಟನೆಯನ್ನು ಬಳಸಿಕೊಂಡಿರುವುದರಿಂದ ಇದೊಂದು ಉತ್ತಮ ನಾಟಕ. ಕಾಳಿದಾಸನು ಹೇಳುವ 'ಲೋಕಚರಿತಂ' ಎಂಬುದು ಇದೇ. ಇದರಲ್ಲಿ ಭಾಗವಹಿಸಿದವರೆಲ್ಲರೂ ಪ್ರಬುದ್ಧರು. ತಮ್ಮ ತಮ್ಮ ಪಾತ್ರಗಳ ಇತಿ ಮಿತಿಗಳ

(3 ನೇ ಪುಟಕ್ಕೆ)

ಡಾ॥ ಎಸ್. ವಿ. ಮಲ್ಲಿಕಾರ್ಜುನ ಭಟ್ಟ,
ಎಂ.ಎ., ಪಿ.ಹೆಚ್.ಡಿ.

"ಮಲೆನಾಡಿನಲ್ಲಿ ಭತ್ತದ ಬೇಸಾಯ"

ಆಹಾರಧಾನ್ಯಗಳನ್ನು ಬೆಳೆಯುವುದು ಈ ದಿನಗಳಲ್ಲಿ ಬಹಳ ದುಬಾರಿಯಾಗಿದೆ. ಆದರಲ್ಲೂ, ಮೊದಲೇ ಇಳುವರಿ ತೀರಾ ಕಮ್ಮಿಯಿರುವ ಮಲೆನಾಡಿನಲ್ಲಂತೂ ಭತ್ತದ ಬೇಸಾಯ ಬಹಳ ಭಾರವಾಗಿ ಪರಿಣಮಿಸಿದೆ. ಆದರೆ ಅದನ್ನು ಬೆಳೆಯದೆ ಇರಲೂ ಸಾಧ್ಯವಿಲ್ಲ.

ಆದಕ್ಕಾಗಿ ನಮ್ಮ ರೈತರುಗಳು ಸ್ವಲ್ಪ ಬುದ್ಧಿ ತೆರೆದು, ವ್ಯವಸಾಯದಲ್ಲಿ ಸ್ವಲ್ಪ ಕೌಶಲ್ಯ ಬಳಸಿ, ಕೆಲವಾದರೂ ಆಧುನಿಕ ಕ್ರಮಗಳನ್ನು ಅಳವಡಿಸಿಕೊಂಡರೆ ಹೆಚ್ಚು ಖರ್ಚಿಲ್ಲದೆ ಇಳುವರಿಯನ್ನು ಬಹಳಷ್ಟು ಸುಧಾರಿಸಬಹುದಲ್ಲದೆ ರೋಗ, ಕೀಟ್ಕ ಮುಂತಾದುವುಗಳಿಂದಾಗುವ ನಷ್ಟವನ್ನೂ ಬಹು ಮಟ್ಟಿಗೆ ಕಮ್ಮಿ ಮಾಡಬಹುದು.

ಈ ದೃಷ್ಟಿಯನ್ನಿಟ್ಟುಕೊಂಡು ಕೃಷಿ ಇಲಾಖೆಯ ಅನುಭವಿಯಾದ ಶ್ರೀ ಕೆ. ಸು. ರಾಮಚಂದ್ರ ಅವರು ಬರೆದ **"ಮಲೆನಾಡಿನಲ್ಲಿ ಭತ್ತದ ಬೇಸಾಯ"** ಎಂಬ 35 ಪುಟಗಳ ಕಿರು ಪುಸ್ತಕವೊಂದನ್ನು ನಮ್ಮ ಪತ್ರಿಕೆಯ 1984ರ ವಿಶೇಷ ಸಂಚಿಕೆಯಾಗಿ ಪ್ರಕಟಿಸಿದ್ದೇವೆ. ಮಲೆನಾಡಿನ ರೈತರ ಸಮಸ್ಯೆಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಈ ಪುಸ್ತಕದಲ್ಲಿ ಅತ್ಯಂತ ಅಗತ್ಯವಾದ ಕೆಲವು ಸುಧಾರಣಾ ಕ್ರಮಗಳನ್ನು ವಿವರಿಸಲಾಗಿದೆ. ಅಲ್ಲದೆ ಭೂಮಿಸಿದ್ಧತೆ, ಬೀಜೋಪಚಾರ, ಗೊಬ್ಬರಗಳು, ರೋಗಗಳು ಮತ್ತು ನಿವಾರಣೋಪಾಯಗಳು ಮುಂತಾದ ವಿಷಯಗಳನ್ನು ಬಹು ಸರಳವಾದ ಭಾಷೆಯಲ್ಲಿ ಚರ್ಚಿಸಲಾಗಿದೆ.

ಈ ಪುಸ್ತಕಕ್ಕೆ **ಕೇವಲ 3 ರೂಪಾಯಿ** ಬೆಲೆ ನಿಗದಿ ಮಾಡಿದ್ದೇವೆ. ಮಲೆನಾಡಿನ ಎಲ್ಲಾ ರೈತರೂ ಇದನ್ನು ಕೊಂಡು, ಓದಿ ಗ್ರಹಿಸಿ ಪ್ರಯೋಜನ ಪಡೆಯಬೇಕೆಂದು ಆಶಿಸುತ್ತೇವೆ.

ಹಳ್ಳಿಗಳಲ್ಲಿನ ಯುವಕ ರೈತ ಸಂಘಗಳು ಮತ್ತು ಯುವಕರ ಬಳಗಗಳು ಒಟ್ಟಿಗೆ ಹಲವು ಪ್ರತಿಗಳನ್ನು ತರಿಸಿ ಪುಸ್ತಕ ಸದುಪಯೋಗವಾಗುವಂತೆ ಹಂಚಬಹುದು. ಹಾಗೆ ಹತ್ತು ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು **ಮುಂಗಡ ಹಣ ಕಳಿಸಿ** ತರಿಸುವವರಿಗೆ ರೂ. 2-50 ಪೈಸೆಯಂತೆ ಪುಸ್ತಕ ಒದಗಿಸುವುದಲ್ಲದೆ ಅಂಚೆ ವೆಚ್ಚ ನಾವೇ ಭರಿಸುತ್ತೇವೆ.

ಕೇವಲ 1500 ಪ್ರತಿಗಳನ್ನು ಮಾತ್ರ ಅಚ್ಚುಹಾಕಿಸಿದ್ದೇವೆ. ಅಗತ್ಯವಿರುವವರು ತ್ವರೆ ಮಾಡಿ.

ಮತದಾನದ ಕ್ಷೇತ್ರವಾರು ವಿವರ - ಯಾರ್ಯಾರಿಗೆ ಎಷ್ಟೆಷ್ಟು

ವಿಧಾನಸಭಾ ಕ್ಷೇತ್ರಗಳು	ಒಟ್ಟು ಮತದಾರರು	ಚಲಾಯಿಸಿದ ಮತಗಳು	ಶೇ.	ಕಾಂಗ್ರೆ	ಸಿ.ಪಿ.ಐ
ಬೆಳ್ತಂಗಡಿ	91,563	58,422	63.83	42,757	9,543
ಕಾರ್ಕಳ	80,645	50,290	62.38	39,102	5,747
ಶೃಂಗೇರಿ	84,182	58,874	69.95	38,799	13,359
ಮೂಡಿಗೆರೆ	85,519	55,868	65.4	35,882	11,120
ಚಿಕ್ಕಮಗಳೂರು	86,308	52.228	60.6	29,673	16,420
ಬೀರೂರು	76,004	52,768	69.4	26,396	21,774
ಕಡೂರು	77,041	52,776	68.5	24,826	23,234
ತರೀಕೆರೆ	96,505	63,766	66.0	31,467	27,652
ಅಂಚೆಮೂಲಕ		98		30	23
ಒಟ್ಟು	6,77,667			2,68,932	1,28,872

'ಬಡಜನರ ಕೃತಜ್ಞತೆಯ ಅಲೆ'—
ಕಾಂಗ್ರೆ ಪ್ರಚಂಡ ಜಯ

ಈ ಸಲದ ಲೋಕಸಭೆ ಚುನಾವಣೆ ಫಲಿತಾಂಶ ಹಲವಾರು ಜನರಿಗೆ ದಿಗ್ಭ್ರಮೆ ಹಿಡಿಸಿದ್ದರಲ್ಲಿ ಸಂಶಯವಿಲ್ಲ. ಸ್ವತಃ ಕಾಂಗ್ರೆಸ್ಸಿನವರಿಗೂ ಕೂಡ ಇದು ನಂಬಲಾಗದಷ್ಟು ಅನಿರೀಕ್ಷಿತವಾಗಿದೆ. ಹೀಗಿರುವಾಗ ವಿರೋಧ ಪಕ್ಷದವರ ಪಾಡಂತೂ ಶೋಚನೀಯ. ಅವರಿಗೆ ಇದರ ತಲೆಬುಡ ತಿಳಿಯದಷ್ಟು ಗೊಂದಲ ಉಂಟಾಗಿದೆ.

542 ಸ್ಥಾನಗಳ ಲೋಕಸಭೆಯಲ್ಲಿ (ಇನ್ನೆರಡು ನಾಮಕರಣ ಸದಸ್ಯರು. ಒಟ್ಟು 544) 508 ಸ್ಥಾನಗಳಿಗೆ ಈಗ ಚುನಾವಣೆ ನಡೆದಿದೆ. ಪಂಜಾಬ್ ಮತ್ತು ಅಸ್ಸಾಂನಲ್ಲಿ ನಡೆಯಲಿಲ್ಲ. ಈ 508 ಸ್ಥಾನಗಳಲ್ಲಿ 400 ಸ್ಥಾನಗಳನ್ನು ಕಾಂಗ್ರೆ ಗೆದ್ದಿದೆ—ಹತ್ತಿರಹತ್ತಿರ ಐದರಲ್ಲಿ ನಾಲ್ಕು ಭಾಗ. ಇಂಥ ಭಾರಿ ಬಹುಮತ ಹಿಂದೆಂದೂ ಬಂದಿರಲಿಲ್ಲ. 1957ರ ಚುನಾವಣೆಯಲ್ಲಿ ನೆಹರೂ 494 ಸ್ಥಾನಗಳಲ್ಲಿ 371 ಸ್ಥಾನ ಗೆದ್ದಿದ್ದರು. 1971ರಲ್ಲಿ ಪ್ರಬಲ 'ಇಂದಿರಾ ಗಾಳಿ' ಇದ್ದಾಗಲೂ ಆಕೆಗೆ ಈ ಪ್ರಮಾಣದ ಬಹುಮತ ಬಂದಿರಲಿಲ್ಲ.

ಈ ಬಾರಿ ವಿರೋಧ ಪಕ್ಷಗಳ ಅತಿರಥ ಮಹಾರಥರೆಲ್ಲ ನೆಲ ಕಚ್ಚಿದ್ದಾರೆ. ಚಂದ್ರಶೇಖರ್, ವಾಜಪೇಯಿ, ಸಮರ ಮುಖರ್ಜಿಯಂಥವರೂ ಸೋಲುತ್ತಾರೆಂದು ಯಾರೂ ಊಹಿಸಲೂ ಸಾಧ್ಯವಿರಲಿಲ್ಲ.

ಆಂಧ್ರ ಮತ್ತು ಕಾಶ್ಮೀರಗಳಲ್ಲಿ ಮಾತ್ರ ಕಾಂಗ್ರೆಸ್ ಪೂರ್ತಿ ನಷ್ಟ ಅನುಭವಿಸಿದೆ. ಆಂಧ್ರದ 40 ಸ್ಥಾನಗಳಲ್ಲಿ ತೆಲುಗು ದೇಶಂ ಪಕ್ಷ 28 ಸ್ಥಾನ ಗಳಿಸಿದರೆ ಕಾಂಗ್ರೆಸ್ ಕೇವಲ 6 ಸ್ಥಾನ ಗಳಿಸಿದ್ದು, ಆ ರಾಜ್ಯದಿಂದ ಸ್ಪರ್ಧಿಸಿದ ಎಲ್ಲ 6 ಮಂದಿ ಕೇಂದ್ರ ಮಂತ್ರಿಗಳೂ ಸೋತಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ 5 ಸ್ಥಾನಗಳಲ್ಲಿ ಕಾಶ್ಮೀರ ಕಣಿವೆಯ 3 ಸ್ಥಾನಗಳೂ ಫಾರೂಕ್ ಅಬ್ದುಲ್ಲಾ ನೇತೃತ್ವದ ನ್ಯಾಶನಲ್ ಕಾನ್ಫರೆನ್ಸ್‌ಗೆ ದಕ್ಕಿದ್ದು, ಆಡಳಿತ ನಡೆಸುತ್ತಿರುವ ಜಿ.ಎಂ. ಶಾ ಅವರ ಪಕ್ಷ ಮಣ್ಣು ಮುಕ್ಕಿದೆ. ಹಾಗೆಯೇ ಆಂಧ್ರದ ಭಾಸ್ಕರ ರಾವ್‌ನ ಪಕ್ಷ ಕೂಡ ನಾಮಾವಶೇಷವಾಗಿದೆ.

ಆದರೆ ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಕಾಂಗ್ರೆ ಭಾರಿ ಮುನ್ನಡೆ ಪಡೆದಿದೆ. ಬಂಗಾಳದಲ್ಲಿ ಕಳೆದ ಸಲ 4 ಸ್ಥಾನ ಹೊಂದಿದ್ದ ಕಾಂಗ್ರೆ ಈ ಸಲ 16 ಸ್ಥಾನ ಗಳಿಸಿದೆ. ಸಿ.ಪಿ.ಎಂ. ಕೇವಲ 18 ಸ್ಥಾನ ಗಳಿಸಿ, ಒಟ್ಟು ಲೋಕ ಸಭೆಯಲ್ಲಿ ತನ್ನ ಸಂಖ್ಯೆಯನ್ನು 36 ರಿಂದ 22 ಕ್ಕೆ ಇಳಿಸಿಕೊಂಡಿದೆ. ಕೇರಳದಿಂದ ಕಳೆದ ಬಾರಿ ಸಿಪಿಐ–ಸಿಪಿಎಂ ಒಟ್ಟಿಗೆ 8 ಸ್ಥಾನ ಹೊಂದಿದ್ದು, ಈ ಸಲ ಸಿಪಿಎಂ 1 ಸ್ಥಾನ ಮಾತ್ರ ಗೆದ್ದಿದೆ; ಸಿಪಿಐ ಎಲ್ಲೂ ಜಯ ಗಳಿಸಿಲ್ಲ. ಜನತಾ 10 ಸ್ಥಾನ – ಅಂದರೆ ಕಳೆದ ಸಲಕ್ಕಿಂತ 12 ಸ್ಥಾನ ಕಡಿಮೆ—ಗಳಿಸಿದೆ. ಬಿಜೆಪಿ (16 ರಿಂದ 2 ಕ್ಕೆ) ಮತ್ತು ದ.ಮ.ಕಿ.ಪ. (42 ರಿಂದ 3 ಕ್ಕೆ) ಧೂಳೀಪಟವಾಗಿವೆ.

ಹಾಗೆಯೇ ವಿರೋಧ ಪಕ್ಷಗಳ ಸರ್ಕಾರಗಳಿದ್ದಲ್ಲಿ, ಅವುಗಳ ಸಾಧನೆಗಳೂ ಮತ ನೀಡುವಾಗ ಜನತೆಯ ಲೆಕ್ಕಕ್ಕೆ ಬಂದಂತೆ ಕಾಣುವುದಿಲ್ಲ. ಉದಾ: ಕರ್ನಾಟಕ ಮತ್ತು ಪ. ಬಂಗಾಳ.

ಕಾಂಗ್ರೆಸ್ಸಿನ ಇಂಥ ಅಭೂತಪೂರ್ವ ಜಯಕ್ಕೆ ಅದರ ಅಭ್ಯರ್ಥಿಗಳ ಯೋಗ್ಯತೆಯಾಗಲೀ, ಆದರ ಸರ್ಕಾರಗಳ ಸಾಧನೆಗಳಾಗಲೀ ಕಾರಣವಲ್ಲವೆಂಬುದು ಸ್ಪಷ್ಟವಿದೆ. ಅಥವಾ ಕಾಂಗ್ರೆ ಘೋಷಿಸಿದ ರಾಷ್ಟ್ರದ ಸಮಗ್ರತೆ–ಭದ್ರತೆ ಇತ್ಯಾದಿಗಳು ಜನರ ಮನಸ್ಸಿಗೆ ಎಷ್ಟರ ಮಟ್ಟಿಗೆ ನಾಟಿದವೆಂಬುದೂ ಅನುಮಾನಾಸ್ಪದವೇ.

ನಮ್ಮ ದೇಶದ ಮತದಾರರು ಯೋಚಿಸಿ, ತರ್ಕಿಸಿ ಮತ ಕೊಡುವುದಕ್ಕಿಂತಲೂ ಭಾವನಾತ್ಮಕವಾದ ಗುಂಗಿನ ಅಲೆಯಲ್ಲಿಯೇ ತೇಲಿಹೋಗುತ್ತಾರೆ ಎಂಬುದು ಈಗಲೂ ಸತ್ಯ. ಕರ್ನಾಟಕದಲ್ಲಿ, ಸರ್ವೋತ್ತಮವಲ್ಲದಿದ್ದರೂ ಹಿಂದೆಂದೂ ಕಾಣದಿದ್ದಷ್ಟು ಒಳ್ಳೆಯ ಸರ್ಕಾರ ನಡೆಸಿದ ಜನತಾ ಪಕ್ಷ ಇಂದಿರಾ ಅಲೆಯಲ್ಲಿ ತೇಲಿಹೋದುದು ಅಥವಾ ಇಡೀ ದೇಶ ಇಂಥ ಅಲೆಯಲ್ಲಿ ಕೊಚ್ಚಿ ಹೋದರೂ ಆಂಧ್ರ ಮತ್ತು ತಮಿಳುನಾಡಲ್ಲಿ ಮಾತ್ರ ಅಲ್ಲಿನ ಸಿನಿಮಾ ಹೀರೋಗಳೇ ಜಯಭೇರಿ ಬಾರಿಸಿದುದು ಇಂಥ ಭಾವನಾತ್ಮಕ ಅಲೆಗೆ ಉದಾಹರಣೆಯಾಗಬಲ್ಲುದು.

ಆದರೆ, ಕೂಲಿ–ನಾಲಿ, ಜೀತ, ರೋಗರುಜಿನ, ಅರೆಹೊಟ್ಟೆ, ದಾರಿದ್ರ್ಯಗಳೇ ಬದುಕಾಗಿರುವ ದೇಶದ ಅರ್ಧಕ್ಕೂ ಹೆಚ್ಚು ಭಾಗ ಜನರೇ ಬಹುಸಂಖ್ಯಾತ ಮತದಾರರಾಗಿರುವ ನಮ್ಮ ದೇಶದಲ್ಲಿ ಒಂದು ಅಂಶ ಮಾತ್ರ ಸ್ಪಷ್ಟ—ಈ ಜನರಿಗೆ ಜೀವನದಲ್ಲಿ ಒಂದು ಆಸೆ–ಭರವಸೆ ಮೂಡಿಸಿ, ಸರ್ಕಾರ ನಮ್ಮ ಬಗ್ಗೆಯೂ ಯೋಚಿಸುತ್ತದೆ, ನಮ್ಮ ಬದುಕಿನಲ್ಲೂ ಇಂದಲ್ಲ ನಾಳೆ ಒಳ್ಳೆಯ ದಿನ ಬರುತ್ತದೆ ಎಂಬ ಆಶಾಭಾವನೆಯನ್ನು ಮೊಟ್ಟ ಮೊದಲು ಹುಟ್ಟಿಸಿದ್ದೇ ಇಂದಿರಾ ಗಾಂಧಿ. ಇಂದಿರಾ ಗಾಂಧಿಯ ನೆನಪಿನೊಂದಿಗೇ ಈ ನಂಬಿಕೆ ಕೂಡ ಈ ಜನಕೋಟಿಯ ಮನಸ್ಸಿನ ಆಳದಲ್ಲಿ ನೆಲೆಯಾಗಿ ಹೋಗಿದೆ. ಬದುಕಿನಲ್ಲಿ ಯಾವುದೇ ತೆರದ ಆಸೆಗೂ ಅವಕಾಶವಿಲ್ಲದ ಇವರ ಪಾಲಿಗೆ ಇಂಥ ಆಶಾವಾದವು ತರುವ ನೆಮ್ಮದಿ—ಅದು ಅವರಿಗೆ ಮಾತ್ರ ಅರ್ಥವಾಗುವಂಥದು. ಹೀಗಾಗಿ, ತಮ್ಮ ಬದುಕಿನಲ್ಲೂ ಒಂದು ಕ್ಷಣವಾದರೂ ನೆಮ್ಮದಿಗೆ ಅವಕಾಶ ಮಾಡಿಕೊಟ್ಟ, ತಮ್ಮ ಪಾಲಿನ ಭಾಗ್ಯದೇವತೆಯಾಗಿ ಕಂಡ ಇಂದಿರಾ ಗಾಂಧಿ ಅಗಲಿದಾಗ ಆಕೆಗೆ ಸಲ್ಲಿಸಿದ ಬಡಬಗ್ಗರ ಕೃತಜ್ಞತೆಯೇ ಈ ವಿಜಯ.

ಇದನ್ನು ಅನುಕಂಪದ ಅಲೆ ಎನ್ನುವುದಕ್ಕಿಂತಲೂ 'ಬಡ ಜನರ ಕೃತಜ್ಞತೆಯ ಅಲೆ' ಎಂದರೇ ಹೆಚ್ಚು ಸಮಂಜಸವಾದೀತು.

(ಇಲ್ಲಿಯೂ ಮತ್ತೆ ಭಾವನೆಯ ಅಲೆಯೇ ಓಟಿನ ಆಧಾರವಾಗುವ ನಿದರ್ಶನ ಸಿಗುತ್ತದೆ.)

ವಿರೋಧ ಪಕ್ಷಗಳು ಒಗ್ಗೂಡಲಾರದೆ, ಸ್ಥಾನ ಹೊಂದಾಣಿಕೆ ಕೂಡ ಮಾಡಿಕೊಳ್ಳಲಾರದೆ ಹೋದುದು, ದೇಶದೊಳಗೆ ಅಶಾಂತಿ, ಭ್ರಷ್ಟತೆ ಹಬ್ಬುತ್ತಿರುವಾಗ ರಾಜೀವ್ ಗಾಂಧಿಯಿಂದ ಜನತೆ ಮಹತ್ತರವಾದುದನ್ನು ನಿರೀಕ್ಷಿಸಿರುವುದು ಕಾಂಗ್ರೆಸ್ಸಿನ ಗೆಲುವಿಗೆ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದಾದರೂ, ಈ 'ಕೃತಜ್ಞತೆಯ ಅಲೆ'ಯೇ ಬಹು ದೊಡ್ಡ ಅಂಶ ಎಂಬುದರಲ್ಲಿ ಸಂಶಯವಿಲ್ಲ. ಪ್ರಾಯಶಃ ಇಂದಿರಾ ಗಾಂಧಿಯೇ ಬದುಕಿರುತ್ತಿದ್ದರೆ ಕಾಂಗ್ರೆಗೆ ಬಹುಮತ ಸಿಗುವುದೇ ಅನುಮಾನವಾಗಿತ್ತು; ಸಿಕ್ಕರೂ ಇಂಥ ಪ್ರಚಂಡ ಬಹುಮತವಂತೂ ಖಂಡಿತ ಸಿಗುತ್ತಿರಲಿಲ್ಲ.

ಈಗ, ಮುಂದೆ ಹೇಗೆ? ಎಂಬ ಪ್ರಶ್ನೆ ಎದುರಾಗುತ್ತದೆ. ರಾಜೀವ್ ಗಾಂಧಿ, ದೇಶದೊಳಗೆ ಹಾಸು ಹೊಕ್ಕಾಗಿರುವ ಕಪ್ಪು ಹಣ ಪೂರ್ತಿ ನಿರ್ಮೂಲ ಮಾಡುತ್ತೇವೆ ಎಂದಿದ್ದಾರೆ. ನಿಜ, ಅವರು ಮನಸ್ಸು ಮಾಡಿದರೆ ಅದೇನೂ ಅಸಾಧ್ಯವಲ್ಲ. ಅವರ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಕ್ಕೆ ಇಂದು ಎದುರಾಡುವ ಪಕ್ಷ ಯಾವುದೂ ಇಲ್ಲ. ಅವರ ಪಕ್ಷದ ಎಲ್ಲರೂ ಅವರ ಈ ನೀತಿಗಳಿಗೆ, ಜನತೆಯ ಕಲ್ಯಾಣಕ್ಕೆ ಬದ್ಧರಾಗಿರುವುದಾದರೆ, ಈ ದೇಶವನ್ನು ನಂದನವನ–ರಾಮರಾಜ್ಯ ಮಾಡಲು ಸಾಕಾಗುವಷ್ಟಿದೆ ಅವರ ಬಲ–ಬೆಂಬಲ.

ಕಪ್ಪು ಹಣ, ಕಳ್ಳ ಸಾಗಾಣಿಕೆ, ಆಹಾರ ಧಾನ್ಯ ಕಲಬೆರಕೆ, ಸರ್ಕಾರಿ ಕಚೇರಿ ಮತ್ತು ನ್ಯಾಯಾಲಯಗಳಲ್ಲಿ ನಿಧಾನ ದ್ರೋಹ, ಅಗತ್ಯ ವಸ್ತುಗಳನ್ನು ಬಚ್ಚಿಟ್ಟು ಬೆಲೆಯೇರಿಸುವಿಕೆ, ಲಂಚ, ಬಡಜನತೆಗೆ ಮೋಸ, ಕಾರ್ಮಿಕರಿಗೆ ಅನ್ಯಾಯ, ಧಾರ್ಮಿಕ ಮತ್ತು ಮತೀಯ ಅಸಹನೆಯ ಪ್ರಸಾರ, ಬೆಳೆಗಾರ ಮತ್ತು ಗ್ರಾಹಕರಿಬ್ಬರನ್ನೂ

(4 ನೇ ಪುಟಕ್ಕೆ)

ನಾಟಕೋತ್ಸವ - ಒಂದು ಸಮೀಕ್ಷೆ

(2 ನೇ ಪುಟದಿಂದ)

ನ್ನರಿತವರು. ಔಚಿತ್ಯವರಿತು ಅಭಿನಯಿಸಿದ್ದರಿಂದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸುವಲ್ಲಿ ಯಶಸ್ವಿಯಾದರು.

ಯುವಕ ಸಂಘಗಳು ವರ್ಷಕೊಮ್ಮೆ ಒಂದು ವಾರ್ಷಿಕೋತ್ಸವವನ್ನು ಆಚರಿಸಿ, ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳುವುದಕ್ಕಿಂತ ಇಂಥ ಕಾರ್ಯಕ್ರಮಗಳನ್ನು ಮಾಡುವುದು ಮೇಲು. ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಇದನ್ನು ಏರ್ಪಡಿಸಿದ್ದರಿಂದ ಆ ಹಬ್ಬದ ಆನಂದ ಆ ಧರ್ಮದವರಿಗೆ ಮಾತ್ರವಲ್ಲ ಉಳಿದ ಧರ್ಮದವರಿಗೂ ಲಭಿಸುವಂತಾಯಿತು.

ಪ್ರತಿಯೊಂದು ಧರ್ಮದ ಗುರಿ ಮಾನವಕೋಟಿಯ ಕಲ್ಯಾಣ. ಇದರ ಸಾಧನೆಗೆ ಬೇಕಾದ ವಾತಾವರಣದ ಸೃಷ್ಟಿಗಾಗಿಯೇ ಪ್ರತಿಯೊಂದು ಧರ್ಮದವರಿಗೂ ದೇವಾಲಯಗಳಿರುವುದು. ಆದರೆ ಯಾವ ದೇವಾಲಯಗಳು ಅಥವಾ ಪವಿತ್ರ ಮಂದಿರಗಳು ಮಾನವನ ಹೃದಯದಲ್ಲಿ ಸಮಾನತೆಯನ್ನು, ವಿಶ್ವಭ್ರಾತೃತ್ವವನ್ನು ಬೆಳೆಸಲು ಅನುಕೂಲ ವಾತಾವರಣವನ್ನು ಸೃಷ್ಟಿಸಬೇಕಾಗಿತ್ತೋ ಅದೇ ದೇವಾಲಯಗಳು ಅಥವಾ ಪವಿತ್ರ ಮಂದಿರಗಳು ಇಂದು ಧರ್ಮರಕ್ಷಣೆ–ಆತ್ಮರಕ್ಷಣೆಯ ಹೆಸರಿನಲ್ಲಿ ಸಂಕುಚಿತ ಮತೀಯ ದುರಭಿಮಾನವನ್ನು ಬೆಳೆಸುತ್ತಿರುವುದು, ಕಡೆಗೆ ಶಸ್ತ್ರಾಸ್ತ್ರ ಸಂಗ್ರಹಾಲಯಗಳಾಗಿ ಮಾರ್ಪಾಡಾಗುತ್ತಿರುವುದು ಒಂದು ದುರಂತವೇ ಸರಿ. ಇವರಿಂದ ಒಂದು ಧರ್ಮದವರಿಗೆ ಸೇರಿದ ಪವಿತ್ರ ಮಂದಿರಗಳನ್ನು, ಧಾರ್ಮಿಕ ಚಟುವಟಿಕೆಗಳನ್ನು ಇನ್ನೊಂದು ಧರ್ಮದವರು ಸಂಶಯಾತ್ಮಕ ದೃಷ್ಟಿಯಿಂದ ನೋಡುವ ವಾತಾವರಣ ಸೃಷ್ಟಿಯಾಗುತ್ತಿದೆ.

ಇಂಥ ಸಮಯದಲ್ಲಿ ವಿವಿಧ ಧರ್ಮೀಯರ ನಡುವೆ ಸೌಹಾರ್ದವನ್ನು ಹೆಚ್ಚಿಸುವಲ್ಲಿ ಇಂಥ ಕಾರ್ಯಕ್ರಮಗಳು ಅತ್ಯಂತ ಉಪಯುಕ್ತವಾಗುತ್ತವೆ. ಈ ದೃಷ್ಟಿಯಿಂದ ಪೂಜ್ಯ ಫಾದರ್‌ರವರ ಮಾರ್ಗದರ್ಶನದಲ್ಲಿ ಈ ಯುವಕ ಸಂಘದವರು ಏರ್ಪಡಿಸಿದ ಈ ಕಾರ್ಯಕ್ರಮ ಅರ್ಥಪೂರ್ಣವಾದುದು, ಉಳಿದವರಿಗೆ ಮಾರ್ಗದರ್ಶಿಯಾಗುವಂಥದು.

ಓದುಗರ ಪತ್ರ

"ಶ್ರಮದಾನಕ್ಕೆ ನಾವೂ ಸಿದ್ಧರಿದ್ದೇವೆ"

ಮಾನ್ಯರೆ,

ನಿಮ್ಮ ತಾ||30-12-84ರ ಪತ್ರಿಕೆಯಲ್ಲಿ ಪ್ರಕಟಿಸಿದ ಕೊಪ್ಪದ ಹಿರೇಕೆರೆ ಹೂಳನ್ನು ಎತ್ತುವ ಬಗ್ಗೆ ಶ್ರಮದಾನದ ಕರೆ ತುಂಬಾ ಸಮಂಜಸವಾಗಿದ್ದು ಇದರ ಬಗ್ಗೆ ನಮ್ಮ ಸದಸ್ಯರು ತುಂಬಾ ಉತ್ಸುಕರಾಗಿ ಶ್ರಮದಾನ ಮಾಡಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

ಆದ್ದರಿಂದ ಈ ಮೂಲಕ ತಮಗೆ ತಿಳಿಸುವುದೇನೆಂದರೆ, ನಮ್ಮ ಕ್ಲಬ್ಬಿನ ಸದಸ್ಯರುಗಳು ಯಾವುದೇ ರಜಾ ದಿನಗಳಲ್ಲಿ ಬಂದು ಶ್ರಮದಾನ ಮಾಡಲು ತಯಾರಿರುವರು ಮತ್ತು ಸಾಧ್ಯವಾದಷ್ಟು ಧನ ಸಹಾಯ ಮಾಡಲು ಒಪ್ಪಿದ್ದಾರೆ.

—ಮಂಜುನಾಥ ಸ್ವಾಮಿ, ಕಾರ್ಯದರ್ಶಿ, ಯಾಂಕರ್ಸ್ ರಿಕ್ರಿಯೇಷನ್ ಕ್ಲಬ್, ಕೊಪ್ಪ

ಚಂದಾ ಹಣ ಕಳಿಸಿ ಸಹಕರಿಸಿ

ಬಹಳ ಜನ ಚಂದಾದಾರರಿಂದ ಪತ್ರಿಕೆಯ ಚಂದಾ ಹಣ ಬಾಕಿಯಿದೆ. ಚಂದಾ ಸಂಗ್ರಹಣೆಯ ನೆಪದಲ್ಲಾದರೂ, ಎಲ್ಲಾ ಹಳ್ಳಿಗಳನ್ನೂ ಸುತ್ತಿ ಹಳ್ಳಿಗಳ ಸ್ಥಿತಿಗತಿಗಳ ಬಗ್ಗೆ ಹೆಚ್ಚು ತಿಳಿಯಬೇಕೆಂಬ ನನ್ನ ಆಸೆ ಇನ್ನೂ ಪೂರ್ತಿ ಈಡೇರಿಲ್ಲ. ಈ ಮಧ್ಯೆ ಚಂದಾ ಹಣ ನಿಲುಗಡೆಯಿಂದ ಪತ್ರಿಕೆಯ ಮುನ್ನಡೆಗೆ ಅಡಚಣೆ ಆದೀತೆಂಬ ಭಯವಿದೆ.

ಈಗಾಗಲೇ ಬಹುತೇಕ ಚಂದಾದಾರರಿಗೆ ಚಂದಾ ಬಾಕಿ ಸೂಚಿಸುವ ಕಾರ್ಡ್ ಕಳಿಸಿದ್ದೇನೆ, ಉಳಿದವರಿಗೆ ಕಳಿಸುತ್ತಿದ್ದೇನೆ. ದಯವಿಟ್ಟು ಉದಾಸೀನ ಮಾಡದೆ ಬೇಗ ಚಂದಾ ಹಣ ಕಳಿಸಿ ಸಹಕರಿಸಿ.

ಸಿರಿಮನೆ ನಾಗರಾಜ್.

ಇಸ್ಪೀಟ್ ಕ್ಲಬ್ ವಾರ್ಷಿಕೋತ್ಸವಕ್ಕೆ ಎಸ್ಸೈ ಅಧ್ಯಕ್ಷತೆ!?

ಶೃಂಗೇರಿ: ಮನರಂಜನೆ ಮತ್ತು ಕ್ರೀಡಾ ಕ್ಲಬ್‌ಗಳೆಂದು ಲೈಸೆನ್ಸ್ ಪಡೆದು ಇಸ್ಪೀಟ್ ಆಟವನ್ನೇ ನಡೆಸಿಕೊಂಡಿರುವ ಎಷ್ಟೋ ಕ್ಲಬ್‌ಗಳು ಎಲ್ಲೆಲ್ಲೂ ಇರುವುದು ಎಲ್ಲರಿಗೂ ಗೊತ್ತು. ಇವುಗಳೊಳಗಿನ ಚಟುವಟಿಕೆ ನೀತಿಬಾಹಿರವೆಂದು ಸಮಾಜ ಅವನ್ನು ಮೈಲಿಗೆಯಾಗಿ ಪರಿಗಣಿಸುವುದೂ, ಗಣ್ಯರು ಅವುಗಳಿಂದ ದೂರವಿರುವುದೂ, ಪೋಲೀಸ್ ಮತ್ತಿತರ ಅಧಿಕಾರಿಗಳು ಅವುಗಳ ಮೇಲೆ ಸದಾ ಹದ್ದಿನ ಕಣ್ಣಿಟ್ಟಿರುವುದೂ ಹಿಂದಿನ ಸಂಪ್ರದಾಯ.(ಈಚೆಗೆ, ಪೋಲೀಸರಿಗೆ ಅಧಿಕಾರಿಗಳಿಗೆ ಇವು ಖಾಯಂ ವರಮಾನದ ಮೂಲವಾಗಿರುವುದೂ ಸತ್ಯ.)

ಆದರೆ, ಬಹಳ ವರ್ಷಗಳಿಂದ ನಡೆಯುತ್ತಿರುವ ಇಂಥ ಇಸ್ಪೀಟ್ ಕ್ಲಬ್ಬೊಂದು 'ವಾರ್ಷಿಕೋತ್ಸವ' ಆಚರಿಸುವುದೂ, ಊರಿನ ಗಣ್ಯರು ಮುಖ್ಯ ಅತಿಥಿಗಳಾಗಿ, ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಅಧ್ಯಕ್ಷರಾಗಿ ಅದನ್ನು ನಡೆಸಿಕೊಡುವುದೂ ಹೊಸ ಬಗೆ. ಇಂಥದೊಂದು ಅಪರೂಪದ ಸಂಪ್ರದಾಯ ಈಚೆಗೆ ಶೃಂಗೇರಿಯಲ್ಲಿ ಆರಂಭವಾಯಿತು!

ಇದು ಬರಲಿರುವ ಹೊಸ ದಿನಗಳ ಮುನ್ನೋಟವೋ ಹೇಗೆ?

ಸರ್ವ ಸದಸ್ಯರ ಸಭೆ

ಹಾಲ್ಮುತ್ತೂರು: ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘದ ಸರ್ವಸದಸ್ಯರ ಮಹಾಸಭೆಡಿಸೆಂಬರ್ 30 ರಂದು ಸಂಘದ ಅಧ್ಯಕ್ಷರಾದ ಹೆಚ್. ಎಸ್. ಜಯರಾಮ ಜೋಯ್ಸರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯದರ್ಶಿ ಹೆಚ್. ಹೆಚ್.ಸುಧಾಕರ್ ಸಂಘದ ವರದಿಓದಿದರು. ಹೆಚ್.ಡಿ. ಶ್ರೀನಿವಾಸ್ ಸ್ವಾಗತಿಸಿ, ಸುರೇಶ್ ನಾಯಕ್ ವಂದಿಸಿದರು. (ವರದಿ: ಚಾವಲ್ಮನೆ ಸುರೇಶ್ ನಾಯಕ್.)

ಜನತಾ ಪಕ್ಷದ ಕೃತಜ್ಞತೆ

ಕೊಪ್ಪ: ಕಳೆದ ಡಿಸೆಂಬರ್ 24ರ ಲೋಕ ಸಭಾ ಚುನಾವಣೆಯಲ್ಲಿ ಜನತಾ ಪಕ್ಷ ಬೆಂಬಲಿತ ಸಿ. ಪಿ. ಐ. ಅಭ್ಯರ್ಥಿ ಬಿ. ಕೆ. ಸುಂದರೇಶ್ ಅವರಿಗೆ ಮತ ನೀಡಿದ ಎಲ್ಲಾ ಅಭಿಮಾನಿಗಳಿಗೆ ಕೊಪ್ಪ ತಾ|| ಜನತಾ ಪಕ್ಷದ ಪರವಾಗಿ ಕಾರ್ಯದರ್ಶಿ ಕುಟ್ಟಿಶೆಟ್ಟಿ ಕೃತಜ್ಞತೆ ಸಲ್ಲಿಸಿದ್ದಾರೆ.

ಶೃಂಗೇರಿ ಬೆಟ್ಟದಲ್ಲಿ ಕುಂಭಾಭಿಷೇಕ

ಶೃಂಗೇರಿ: ಇಲ್ಲಿನ ಶ್ರೀ ಬೆಟ್ಟದ ಮಲಹಾನಿಕರೇಶ್ವರ ದೇವಸ್ಥಾನದಲ್ಲಿ ಫೆ. 11 ರಂದು ಕುಂಭಾಭಿಷೇಕ ನಡೆಯಲಿದೆ. ಈ ಸಂಬಂಧವಾಗಿ ಜ. 23 ರಿಂದ ಫೆ. 12 ರವರೆಗೂ ವಿವಿಧ ಪೂಜೆ, ಅರ್ಚನೆ, ಉತ್ಸವ ಮುಂತಾದುವು ನಡೆಯಲಿದ್ದು; ಪ್ರತಿ ದಿನ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ನಾಟಕ ಸ್ಪರ್ಧೆಯ ಪ್ರಶಸ್ತಿಗಳು

ಕೊಪ್ಪ: ಇಲ್ಲಿನ ನಿತ್ಯಾಧಾರ ಮೂರ್ತಿ ಯುವಕ ಸಂಘದ ಆಶ್ರಯದಲ್ಲಿ ಡಿ. 27 ರಿಂದ 30 ರ ವರೆಗೆ ನಡೆದ ಕೊಪ್ಪ ತಾ|| ಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಶಸ್ತಿ ಗಳಿಸಿದ ವಿವರ ಹೀಗಿದೆ:

ಮೊದಲ ಬಹುಮಾನ: ಬ್ಯಾಂಕರ್ಸ್ ರಿಕ್ರಿಯೇಶನ್ ಕ್ಲಬ್, ಕೊಪ್ಪ, ('ಒಂದೂರಲ್ಲಿ ಒಬ್ಬ'); 2 ನೇ ಬಹುಮಾನ: ಅಂಕುರ ಬಳಗ, ಕೊಪ್ಪ,('ಪೋಲೀಸರಿದ್ದಾರೆ, ಎಚ್ಚರಿಕೆ.') ಅಭಿನಯದಲ್ಲಿ: ಗುರುರಾಜ ತಂತ್ರಿ –1, ವಿಶ್ವನಾಥ್–2 (ಇಬ್ಬರೂ ಅಂಕುರ ಬಳಗ), ಕೆ. ಎಸ್. ಪ್ರಕಾಶ್ ಮತ್ತು ಪಿ. ವಿ. ನರಸಿಂಹ–3.

ಸ್ಪರ್ಧೆಯಲ್ಲಿ ಕೊಪ್ಪದ ನಾಲ್ಕು ತಂಡಗಳು ಮತ್ತು ಬೊಮ್ಮಲಾಪುರದ ಯುವಕ ಸಂಘ ಒಟ್ಟು 5 ತಂಡಗಳು ಭಾಗವಹಿಸಿದ್ದವು. ಈ ಸ್ಪರ್ಧೆ ಪ್ರತಿ ವರ್ಷ ಇದೇ ವೇಳೆಗೆ ನಡೆಯುವುದಾದರೆ ತಾಲ್ಲೂಕಿನ ಎಲ್ಲ ಕಡೆಗಳಿಂದ ಇನ್ನೂ ಹೆಚ್ಚು ಹೆಚ್ಚು ತಂಡಗಳು ಭಾಗವಹಿಸುವುದರಲ್ಲಿ ಸಂಶಯವಿಲ್ಲ.

ಜನರಿಂದ ಬಂದ ಒಂದು ಅಭಿಪ್ರಾಯವೆಂದರೆ– ನಾಟಕಗಳು ರಾತ್ರಿ 8 ಅಥವಾ 8-30 ಗಂಟೆಗೆ ಆರಂಭವಾದರೆ ಅತಿ ಹೆಚ್ಚು ಜನರಿಗೆ ನೋಡಲು ಸಾಧ್ಯವಾಗುತ್ತದೆ. ಈ ಬಾರಿ 7 ಗಂಟೆಗೇ ಆರಂಭ ಎಂದು ಸಮಯ ನಿಗದಿ ಮಾಡಲಾಗಿತ್ತು. ಅನಿವಾರ್ಯ ಕಾರಣಗಳಿಂದ ಒಂದು ದಿನ 9 ಗಂಟೆಯಾದರೆ ಮತ್ತೊಂದು ದಿನ 7-30 ಕ್ಕೇ ಆರಂಭವಾಗುತ್ತಿತ್ತು. ಹೀಗಾಗಿ ಬಹಳ ಜನ ತಮ್ಮ ಮೆಚ್ಚಿನ ತಂಡಗಳ ನಾಟಕಗಳನ್ನು ತಪ್ಪಿಸಿಕೊಂಡು ನಿರಾಶೆಪಟ್ಟರು.

ವಾಣಿಜ್ಯ ಪರೀಕ್ಷೆ ಫಲಿತಾಂಶ

ನರಸಿಂಹರಾಜಪುರ: ಕಳೆದ ನವೆಂಬರ್‌ನಲ್ಲಿ ನಡೆದ ವಾಣಿಜ್ಯ ಪರೀಕ್ಷೆಗೆ ಇಲ್ಲಿನ ಶ್ರೀ ಜ್ಯೋತಿ ವಾಣಿಜ್ಯ ವಿದ್ಯಾ ಶಾಲೆಯಿಂದ ಒಟ್ಟು 38 ವಿದ್ಯಾರ್ಥಿಗಳು ಕುಳಿತಿದ್ದು ಇವರಲ್ಲಿ 30 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 79ರಷ್ಟು ಫಲಿತಾಂಶ ಬಂದಿದೆ. ವಿವಿಧ ವಾಣಿಜ್ಯ ಪರೀಕ್ಷೆಗಳ ಶೇಕಡಾವಾರು ಫಲಿತಾಂಶ ಈ ರೀತಿ ಇದೆ: ಕನ್ನಡ ಬೆರಳಚ್ಚು ಸೀನಿಯರ್: ಶೇ. 100, ಕನ್ನಡ ಬೆರಳಚ್ಚು ಜ್ಯೂನಿಯರ್: ಶೇ. 92, ಇಂಗ್ಲೀಷ್ ಬೆರಳಚ್ಚು ಸೀನಿಯರ್: ಶೇ. 67, ಇಂಗ್ಲೀಷ್ ಬೆರಳಚ್ಚು ಜ್ಯೂನಿಯರ್: ಶೇ. 64.

ಸಂಸ್ಕೃತ ಸಂಭಾಷಣೆ ಶಿಬಿರ

ಕೊಪ್ಪ: ಪ್ರಬೋಧಿನಿ ಮಾತೃ ಮಂಡಳಿ ಮತ್ತು ರಾಷ್ಟ್ರಸೇವಿಕಾ ಸಮಿತಿ ಆಶ್ರಯದಲ್ಲಿ ಮಹಿಳೆಯರಿಗಾಗಿ ಮತ್ತು ಪ್ರೌಢಶಾಲೆ–ಕಾಲೇಜು ವಿದ್ಯಾರ್ಥಿನಿಯರಿಗಾಗಿ 2 ಪ್ರತ್ಯೇಕ ಸಂಸ್ಕೃತ ಸಂಭಾಷಣಾ ಶಿಬಿರಗಳು ಇಲ್ಲಿನ ಮಹಿಳಾ ಸಮಾಜದ ಆವರಣದಲ್ಲಿ ಜ. 1 ರಿಂದ 10 ರ ವರೆಗೆ ನಡೆಯುತ್ತಿವೆ. ಮೊದಲ ಶಿಬಿರದಲ್ಲಿ 30 ಮಹಿಳೆಯರೂ 2 ನೇ ಶಿಬಿರದಲ್ಲಿ 28 ವಿದ್ಯಾರ್ಥಿನಿಯರೂ ಭಾಗವಹಿಸುತ್ತಿದ್ದಾರೆ.

ಜ. 10 ರಂದು ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ಸಾರ್ವಜನಿಕವಾಗಿ ಜರುಗಲಿದೆ.

ಬಿದರಗೋಡು: ಇಲ್ಲಿಗೆ ಸಮೀಪದ ಹೊಸಗದ್ದೆ ಎಂಬಲ್ಲಿನ ಮತಗಟ್ಟೆಯಲ್ಲಿ ಮತ ನೀಡಲು ಬರುತ್ತಿದ್ದಾಗಲೇ ಸುಬ್ಬಣ್ಣಾಚಾರಿ ಎಂಬ 65 ವರ್ಷದ ವೃದ್ಧರು ಹಠಾತ್ತಾಗಿ ಹೃದಯಾಘಾತದಿಂದ ನಿಧನರಾದ ದಾರುಣ ಘಟನೆ ಸಂಭವಿಸಿತೆಂದು ತಿಳಿದು ಬಂದಿದೆ. (ವರದಿ: ಎಸ್. ವಿ. ರಮೇಶ್)

ಕೃತಜ್ಞತೆಯ ಅಲೆ

(3 ನೇ ಪುಟದಿಂದ)

ದೋಚುವ ಮಧ್ಯವರ್ತಿಗಳು, ವರದಕ್ಷಿಣೆ ಮತ್ತು ಆ ಕಾರಣಕ್ಕಾಗಿ ಕೊಲೆ, ಮಹಿಳೆಯರ ಮೇಲೆ ಅತ್ಯಾಚಾರ, ದುರ್ಬಲ ವರ್ಗದವರ ಮೇಲೆ ದೌರ್ಜನ್ಯ.... ಈ ಎಲ್ಲ ಸಮಸ್ಯೆಗಳೂ ಪರಿಹರಿಸಲಾರದವುಗಳೇನಲ್ಲ ಜಮೀನು ಬೇಕೆಂಬ ಎಲ್ಲ ಬಡವರಿಗೂ ಇಷ್ಟಿಷ್ಟು ಸಾಗುವಳಿ ಯೋಗ್ಯ ಭೂಮಿಯು ಹಂಚಿಕೆ ಅಸಾಧ್ಯ ವೇನಲ್ಲ.

ಇದಕ್ಕೆಲ್ಲ ಬೇಕಾಗಿರುವುದೇನು? ದೇಶದ ಈಗಿನ ಸ್ಥಿತಿಯಲ್ಲಿ ಇದು ಎಷ್ಟು ಸಾಧ್ಯ? ಮತ್ತೊಮ್ಮೆ ಚರ್ಚಿಸೋಣ.

—ಸಿರಿಮನೆ ನಾಗರಾಜ್.

ಕೊಪ್ಪದಲ್ಲಿ ದೈಹಿಕ ಅರ್ಹತಾ ಪರೀಕ್ಷೆ

ಕೊಪ್ಪ: ಇದೇ ತಿಂಗಳ 11 ಮತ್ತು 12 ರಂದು ಕೊಪ್ಪದ ಕಿರಿಯ ಕಾಲೇಜಿನಲ್ಲಿರುವ "ರಾಷ್ಟ್ರೀಯ ದೈಹಿಕ ಅರ್ಹತಾ ಕಾರ್ಯಕ್ರಮ ಕೇಂದ್ರ"ದ ಆಶ್ರಯದಲ್ಲಿ ದೈಹಿಕ ಅರ್ಹತಾ ಪರೀಕ್ಷೆಯನ್ನು ನಡೆಸಲಾಗುವುದು. ಬಾಳಗಡಿಯ ಮೈದಾನದಲ್ಲಿ ಬೆಳಗ್ಗೆ 9 ಗಂಟೆಯಿಂದ ನಡೆಯುವ ಈ ಪರೀಕ್ಷೆಯಲ್ಲಿ ಎಲ್ಲಾ ವರ್ಗದ ಜನರೂ ಹಾಗೂ 14 ವರ್ಷಕ್ಕೆ ಮೇಲ್ಪಟ್ಟ ವಿದ್ಯಾರ್ಥಿಗಳೂ ಸಹ ಭಾಗವಹಿಸ ಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಹೆಚ್.ಎ.ಗೋಪಾಲ್ ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಕಿರಿಯ ಕಾಲೇಜು, ಕೊಪ್ಪ, ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಶ್ರದ್ಧಾಂಜಲಿ

ಕೊಪ್ಪ ತಾ|| ಕಲ್ಲುಗುಡ್ಡೆ ಗ್ರಾಮದ ಬಾಳೆಕುಡಿಗೆ ಸದಾಶಿವರಾಯರ ಹಿರಿಯ ಮಗ (21 ವರ್ಷದ) ಬಿ.ಎಸ್. ಹರಿಶ್ಚಂದ್ರ, ಬಿ.ಎ. ಇವರು 29.12.84ರಂದು ಹರಿಹರದ ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಮುಳುಗಿ ಅಕಾಲ ಮರಣವನ್ನಪ್ಪಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಕೋರುವ,

—ಬಿ.ಪಿ.ಸದಾಶಿವ ರಾವ್

ಮತ್ತು ಬಳಗ,

ಬಾಳೆಕುಡಿಗೆ.

ಕೃತಜ್ಞತೆಗಳು

ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಮತ ನೀಡಿದ ಮತದಾರರಿಗೆ, ನಮ್ಮ ಬೆಂಬಲಕ್ಕೆ ನಿಂತ ಮಿತ್ರ ಪಕ್ಷಗಳ, ಪ್ರಗತಿಪರ ಸಂಘಟನೆಗಳ ಹಾಗೂ ನಮ್ಮ ಪಕ್ಷದ ನಾಯಕರು–ಕಾರ್ಯಕರ್ತರುಗಳಿಗೆ ಅನಂತ ವಂದನೆಗಳನ್ನು ಈ ಮೂಲಕ ಸಲ್ಲಿಸುತ್ತೇವೆ.

ಎನ್.ಆರ್. ರಾಮಚಂದ್ರ,
ಸಂಚಾಲಕ, ಶೃಂಗೇರಿ ಕ್ಷೇತ್ರಚುನಾವಣಾ ಪ್ರಚಾರ ಸಮಿತಿ (ಸಿಪಿಐ)

ಬಿ.ಕೆ. ಸುಂದರೇಶ್,
ಅಭ್ಯರ್ಥಿ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಳಿಗೆ ಅಚ್ಚುಕೂಟ, ಕೊಪ್ಪ.